

ಮಾಡಿದ. ಹೂ ಗಿಡ ಮರಗಳನ್ನು ನೆಟ್ಟು ತಾನೆಷ್ಟು ಸರಳ ಹಾಗೂ ವಿಧೇಯ ಜೀವನವನ್ನು ಸಾಗಿಸುತ್ತಿದ್ದೇನೆ ಎಂದು ತೋರ್ಪಡಿಸಲು ಆ ಉದ್ಯಾನವನಕ್ಕೆ 'ಹಂಬಲ್ ಅಡ್ಮಿನಿಸ್ಟ್ರೇಟರ್ಸ್ ಗಾರ್ಡನ್' (ವಿಧೇಯ ಆಡಳಿತಗಾರನ ಉದ್ಯಾನವನ) ಎಂದು ಹೆಸರಿಟ್ಟ. ಜೊತೆಗೆ ಅಲ್ಲಿದ್ದ ಹಳೆಯ ಟೋಯ್ಸ್ಟ್ ಮಂದಿರಗಳ ಮಧ್ಯೆ ಚೀನಾ ಮಾದರಿಯ ಸಾಂಪ್ರದಾಯಿಕ ಮನೆಯೊಂದನ್ನು ಕಟ್ಟಿ ಅಲ್ಲೇ ನೆಲೆಸಿದ.

ಕಾಲಾಂತರದಲ್ಲಿ ಈ ಉದ್ಯಾನವನ ಹಲವು ಬದಲಾವಣೆಗಳನ್ನು ಕಂಡಿದೆ. ಆದರೆ ಉದ್ಯಾನವನದ ಮೂಲ ರಚನೆಯೇ ಅನನ್ಯವಾಗಿದೆ. ಸುಮಾರು 6 ಹೆಕ್ಟೆರ್ ಜಾಗದಲ್ಲಿರುವ ಈ ಉದ್ಯಾನಕ್ಕೆ ನೈಸರ್ಗಿಕವಾಗಿ ನೀರು ದೊರೆಯುವಂತೆ ಸುತ್ತಲೂ ಕೊಳಗಳನ್ನು ನಿರ್ಮಿಸಲಾಗಿದೆ. ಅದರ ಸುತ್ತ ಕಟ್ಟಲಾಗಿರುವ ಪುರಾತನ ಚೀನಾ ವಾಸ್ತುಶೈಲಿಯ ಮಂದಿರಗಳು, ಕಿರುಸೇತುವೆಗಳು ಹಾಗೂ ಕಟ್ಟಡಗಳನ್ನು ಹಾಗೆಯೇ ಸಂರಕ್ಷಿಸಲಾಗಿದೆ.

ಸುತ್ತಲೂ ಹಸಿರು ತುಂಬಿರುವ ಪುಟ್ಟ ಗುಡ್ಡಗಳು, ವೈವಿಧ್ಯಮಯ ಬಣ್ಣಗಳಿಂದ ವಿಕಸಿತ ಪುಷ್ಪಲತೆಗಳು, ಬೋನ್ಸಾಯಿ  ಗಿಡಗಳು, ಅಪೂರ್ವ ಶಿಲಾರಚನೆಗಳು, ಚಿತ್ತಾಕರ್ಷಕ ವರ್ಣಮಯ ಎಲೆಗಳಿಂದ ಆವೃತವಾಗಿರುವ ಮರಗಿಡಗಳು, ನಳನಳಿಸುವ ಬಿದಿರುಮೆಳೆಗಳು; ಉದ್ಯಾನದ ಸೌಂದರ್ಯವನ್ನು ಆಸ್ವಾದಿಸುತ್ತಾ ವಿರಮಿಸುವುದಕ್ಕೆ ನಿರ್ಮಿತವಾದ ಪುರಾತನ ಶೈಲಿಯ ಪೆವಿಲಿಯನ್. ಇದೆಲ್ಲವೂ ಪ್ರವಾಸಿಗನ ಮನಸೂರೆಗೈಯುತ್ತಾ ಗತಕಾಲದ ಇತಿಹಾಸವನ್ನು ಕಣ್ಣಮುಂದೆ ತೆರೆದಿಡುತ್ತದೆ.





ಉದ್ಯಾನವನವನ್ನು ಪೂರ್ವ, ನಡುಗಡ್ಡೆ ಹಾಗೂ ಪಶ್ಚಿಮವೆಂದು ಮೂರು ವಿಭಿನ್ನ ವಿಭಾಗಗಳಾಗಿ ವಿಂಗಡಿಸಲಾಗಿದೆ.  ಪೂರ್ವಭಾಗವು ವಿಶಾಲವಾಗಿದ್ದು ಬಿದಿರುಮೆಳೆ ಹಾಗೂ ಮರಗಳಿಂದ ತುಂಬಿದ್ದು ಆರ್ಕಿಡ್ಸ್, ಸ್ನೋಹಾಲ್ ಹಾಗೂ ತಾವರೆಯ ಕೊಳವಿದೆ. ಸುತ್ತ ಕೊಳವಿರುವ ನಡುಗಡ್ಡೆಯು ಇಡೀ ಉದ್ಯಾನವನದಲ್ಲೇ ಅತ್ಯಾಕರ್ಷಕ ತಾಣ. ವಸಂತ ಋತುವಿನಲ್ಲಿ ಈ ಕೊಳವು ಕಮಲಗಳಿಂದ ತುಂಬಿ ಅದರಿಂದ ಹೊರಹೊಮ್ಮುವ ಸುವಾಸನೆಯು ಅಲ್ಲಿರುವ ಮಹಲನ್ನು ತುಂಬುವುದರಿಂದ ಅದನ್ನು 'ಯುವಾನ್ಷಿಯಾಂಗ್ ತಾಂಗ್' (ವಿಶಿಷ್ಟ ಸುವಾಸನೆಯ ಮಹಲು) ಎಂದೇ ಕರೆಯುತ್ತಾರೆ.

ನಡುಗಡ್ಡೆಯನ್ನು ಹಾದುಹೋಗಲು ಕಾಮನಬಿಲ್ಲನ್ನು ಹೋಲುವ ಪುರಾತನ ಕಿರುಸೇತುವೆಗಳಿದ್ದು ಇವುಗಳ ರಚನೆಯೂ ವೈಶಿಷ್ಟಪೂರ್ಣ. ಪಶ್ಚಿಮ ಭಾಗದಲ್ಲಿ ಪುರಾತನ ಶೈಲಿಯ ವೈವಿಧ್ಯಮಯ ಕಟ್ಟಡಗಳಿದ್ದು ಅವು ಇನ್ನೂ ಸುಧೃಡವಾಗಿವೆ. ವಿವಿಧ ಶಿಲಾವಿನ್ಯಾಸಗಳು ಹಾಗೂ ಬೋನ್ಸೈ ಗಿಡಗಳು ನೋಡಲು ಬಹಳ ಆಕರ್ಷಣೆಯವಾಗಿದೆ. ಮರಗಳ ಮಧ್ಯೆ ಹರಡಿರುವ ಹೂದೋಟವು ಸಾವಿರಾರು ಹೂಗಳಿಂದ ಕಂಗೊಳಿಸುತ್ತಿದ್ದರೆ ಪ್ರಕೃತಿಯೇ ಸೌಂದರ್ಯದೇವತೆಯಾಗಿ ಧರೆಗಿಳಿದಂತೆ ಕಂಡುಬರುತ್ತಿದೆ.

ಈ ಉದ್ಯಾನವನ ಚೀನೀಯರು ಹಾಗೂ ವಿದೇಶೀ ಪ್ರವಾಸಿಗರಿಂದ ಸದಾ ತುಂಬಿರುತ್ತದೆ. ಉದ್ಯಾನವನದ ಹಸಿರು ಸೌಂದರ್ಯವನ್ನು ಆಸ್ವಾದಿಸಿ, ಹೊರಬಂದರೆ ಚೀನಾದ ಕರಕುಶಲ ವಸ್ತುಗಳ ಕುಸುರಿ ಪ್ರೌಢಿಮೆಯನ್ನು ಹೊತ್ತ ವಸ್ತುಗಳನ್ನು ಮಾರುವ ಅಂಗಡಿಗಳು ಎದುರುಗೊಂಡವು.